ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–12.**

ಸಂಖ್ಯೆ:ಪಪೂಶಿಇ/ಗಣಕ/ಬೋ.ಸಂ.ಮಾ/2020–21 ದಿನಾಂಕ: 09.12.2020

**ಸುತ್ತೋಲೆ**

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕ/ಬೋಧಕೇತರರ ಮಾಹಿತಿ ಮತ್ತು ಸಂಯೋಜನೆಗಳ ಮಾಹಿತಿಯನ್ನು PU Online Portalನಲ್ಲಿ ದಾಖಲಿಸುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಬೋಧಿಸುವ ಎಲ್ಲಾ ಕಾಲೇಜುಗಳಲ್ಲಿ (ಸರ್ಕಾರಿ, ಅನುದಾನಿತ, ಅನುದಾನರಹಿತ, ವಿಭಜಿತ ಹಾಗೂ ಬಿಬಿಎಂಪಿ) ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ನೌಕರರ ಸೇವಾ ವಿವರಗಳ ಹಾಗೂ ಎಲ್ಲಾ ಕಾಲೇಜಿನವರು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆದುಕೊಂಡಿರುವ ಸಂಯೋಜನೆಗಳ ವಿವರಗಳನ್ನು ಕಡ್ಡಾಯವಾಗಿ ಇಲಾಖೆಯ PU online Portalನಲ್ಲಿ ದಿನಾಂಕ: 06–01–2021ರೊಳಗೆ ದಾಖಲಿಸತಕ್ಕದ್ದು. ಸದರಿ ದಾಖಲಿಸಿದ ಮಾಹಿತಿಯನ್ನು ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಜಿಲ್ಲಾ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು, ಜಿಲ್ಲಾ ಉಪ ನಿರ್ದೇಶಕರುಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಿ ಸಲ್ಲಿಸುವ ಪಟ್ಟಿಯನ್ನು ದೃಢೀಕರಿಸಿ ಕೇಂದ್ರ ಕಛೇರಿಯ ಸಹಾಯಕ ನಿರ್ದೇಶಕರು (ಗಣಕ ವಿಭಾಗ)ಕ್ಕೆ ದಿನಾಂಕ: 11-01–2021ರೊಳಗೆ ಸಲ್ಲಿಸಲು ಸೂಚಿಸಿದೆ.

ಮೇಲೆ ಸೂಚಿಸಿರುವ ಮಾಹಿತಿಗಳನ್ನು ದಾಖಲಿಸದ ಪ್ರಾಂಶುಪಾಲರ ಮೇಲೆ ಇಲಾಖಾ ಶಿಸ್ತು ಕ್ರಮ ಜರುಗಿಸಲಾಗುವುದು.

**ಸೇವಾ ವಿವರಗಳನ್ನು ದಾಖಲಿಸುವ ಬಗ್ಗೆ ಸೂಚನೆಗಳು :**

**ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ:**

- Online ನಲ್ಲಿ ದಾಖಲಿಸುವ ಎಲ್ಲಾ ಮಾಹಿತಿಗಳನ್ನು ಸೇವಾ ಪುಸ್ತಕದಲ್ಲಿರುವಂತೆಯೇ ದಾಖಲಿಸಬೇಕು.
- ಪ್ರಭಾರಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು ತಮ್ಮ ಹುದ್ದೆಯನ್ನು ಉಪನ್ಯಾಸಕರು ಎಂಬುದಾಗಿ ನಮೂದಿಸಬೇಕು.
- Date of entry into service : ಅಂಕಣದಲ್ಲಿ ಸರ್ಕಾರಿ ಸೇವೆಗೆ ಸೇರಿದ ದಿನಾಂಕವನ್ನು ನಮೂದಿಸಬೇಕು.
- Date of entry as lecturer: ಅಂಕಣದಲ್ಲಿ ಉಪನ್ಯಾಸಕರಾಗಿ ಸೇವೆಗೆ ಸೇರಿದ ದಿನಾಂಕ/ ಉಪನ್ಯಾಸಕರಾಗಿ ಪದೋನ್ನತಿ ಪಡೆದ ದಿನಾಂಕವನ್ನು ನಮೂದಿಸಬೇಕು.
- ಹೊಸದಾಗಿ ಸೇವೆಗೆ ಸೇರಿರುವ ಉಪನ್ಯಾಸಕರ ಮಾಹಿತಿಯನ್ನು ಸಹ ದಾಖಲಿಸುವುದು.

**ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ:**

- ಅನುದಾನಿತ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ತಮ್ಮ ಹುದ್ದೆಯು ಇಲಾಖೆಯಿಂದ ಅನುಮೋದನೆಯಾಗಿದ್ದಲ್ಲಿ ಮಾತ್ರ ಪ್ರಾಂಶುಪಾಲರೆಂಬುದಾಗಿ ದಾಖಲಿಸುವುದು, ಅನುಮೋದನೆ ಆಗಿಲ್ಲದಿದ್ದಲ್ಲಿ ಉಪನ್ಯಾಸಕರು ಎಂಬುದಾಗಿ ದಾಖಲಿಸುವುದು ಹಾಗೂ ಇದರ ಬಗ್ಗೆ ಆದೇಶದ ಪ್ರತಿ ಲಗತ್ತಿಸಬೇಕು.
- Date of entry into service (As Principal/Lecturer): ಅಂಕಣದಲ್ಲಿ ಹುದ್ದೆ ಇಲಾಖೆಯಿಂದ ಅನುಮೋದನೆ ಹೊಂದಿದ ದಿನಾಂಕವನ್ನು ನಮೂದಿಸಬೇಕು.

- ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅನುದಾನರಹಿತ ಉಪನ್ಯಾಸಕರು/ಬೋಧಕೇತರ ಸಿಬ್ಬಂದಿಯವರು Not Approved ಎಂದು ದಾಖಲಿಸಬೇಕು.
- ಉಪನ್ಯಾಸಕರು ಅರೆಕಾಲಿಕ ಅಥವ ಪೂರ್ಣಕಾಲಿಕ (part time/full time) ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಬೇಕು.

**ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಗೆ:**

- ಉಪನ್ಯಾಸಕರು ಅರೆಕಾಲಿಕ ಅಥವ ಪೂರ್ಣಕಾಲಿಕ (part time/full time) ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಬೇಕು.
- ಅರೆಕಾಲಿಕ ಉಪನ್ಯಾಸಕರು ಬೇರೆ ಬೇರೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಒಂದೇ ಕಾಲೇಜಿನಲ್ಲಿ online ಮೂಲಕ ಮಾಹಿತಿ ದಾಖಲಿಸಬೇಕು.

**ಬಿ.ಬಿ.ಎಂ.ಪಿ ಪದವಿ ಪೂರ್ವ ಕಾಲೇಜುಗಳಿಗೆ:**

- ಉಪನ್ಯಾಸಕರಾಗಿ ನೇರ ನೇಮಕಾತಿ ಅಥವ ಪದೋನ್ನತಿ ಪಡೆದಿರುವ ಬಗ್ಗೆ ಮಾಹಿತಿ ನೀಡಬೇಕು.

**ವಿಭಜಿತ ಪದವಿ ಪೂರ್ವ ಕಾಲೇಜುಗಳಿಗೆ:**

- ಉಪನ್ಯಾಸಕರು ಅರೆಕಾಲಿಕ ಅಥವಾ ಪೂರ್ಣಕಾಲಿಕ (part time/full time) ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಬೇಕು.

**ಸಂಯೋಜನೆ ವಿವರಗಳನ್ನು ದಾಖಲಿಸುವ ಬಗ್ಗೆ ಸೂಚನೆಗಳು:**

- ಇಲಾಖೆಯಿಂದ ಅನುಮೋದಿತವಾಗಿರುವ ಮತ್ತು 2017ರಲ್ಲಿ ಮಾನ್ಯತೆ ನವೀಕರಣಗೊಂಡಿರುವ ಸಂಯೋಜನೆಗಳ ಮಾಹಿತಿಯನ್ನು Online ನಲ್ಲಿ ದಾಖಲಿಸುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ (ಅನುಷ್ಠಾನಕ್ಕಾಗಿ).
3. ಸಹಾಯಕ ನಿರ್ದೇಶಕರು, ಇ–ಆಡಳಿತ ಪಪೂಶಿಇ (ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು).
4. ಕಛೇರಿ ಪ್ರತಿ.